ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ಸಿ4[6] ಸ್ವ ಭಾ ಚಿ ಪ್ರ ಸ್ಪ 09/2017-18

ದಿನಾಂಕ:22.08.2017

## ಸುತ್ತೋಲೆ

**ವಿಷಯ**:-ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆ ಆಯೋಜಿಸುವ ಬಗ್ಗೆ.

**ಉಲ್ಲೇಖ**:- ಮಾನವ ಸಂಪನ್ಮೂಲ ಇಲಾಖೆ, ನವದೆಹಲಿ ಇವರ ಪತ್ರ ಸಂಖ್ಯೆ : 27-8/244-ಇಇ-16 ದಿನಾಂಕ: 16.08.2017

- - -

ವಿಷಯಕ್ಕೆ ಸಂಬಂಧಿಸಿದಂತೆ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ,ಸ್ವಚ್ಛತೆಯ ಸಂದೇಶವನ್ನು ಸಾರಲು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನು 5,ಸೆಪ್ಟೆಂಬರ್ 2017ರ ಅಂದರೆ ಶಿಕ್ಷಕರ ದಿನಾಚರಣೆಯ ಸಂದಂರ್ಭದಲ್ಲಿ ಏರ್ಪಡಿಸುವುದರ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಸ್ವಚ್ಛ ಭಾರತ ಮಿಷನ್‌ನಲ್ಲಿ ಶಾಲಾ ಮಕ್ಕಳು ಹಾಗೂ ಯುವಕರು ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಸ್ವಚ್ಛ ಭಾರತ ಮಿಷನ್‌ಗೆ ಹೊಸ ಚಿಂತನೆ, ಚೈತನ್ಯ ಮತ್ತು ಉತ್ಸಾಹವನ್ನು ತುಂಬಬೇಕಾಗಿರುತ್ತದೆ.

**ಸ್ಪರ್ಧೆಗಳನ್ನು ಏರ್ಪಡಿಸಬೇಕಾದ ತರಗತಿಗಳು.:-**

- ✓ ಚಿತ್ರಕಲಾ ಸ್ಪರ್ಧೆಯನ್ನು 1 ರಿಂದ 5ನೇ ತರಗತಿಯ ಮಕ್ಕಳಿಗೆ ಮಾತ್ರ ಏರ್ಪಡಿಸುವುದು.
- ✓ ಪ್ರಬಂಧ ಸ್ಪರ್ಧೆಯನ್ನು ಎರಡು ವಿಭಾಗಗಳಲ್ಲಿ ಅಂದರೆ ವಿಭಾಗ-1: 6 ರಿಂದ 8ನೇ ತರಗತಿ ವಿದ್ಯಾರ್ಥಿಗಳು ಮತ್ತು ವಿಭಾಗ-2: 9ರಿಂದ12ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಏರ್ಪಡಿಸುವುದು.

**ಸ್ಪರ್ಧಾ ವಿಷಯಗಳು:-**

- ✓ ಪ್ರಬಂಧ ಸ್ಪರ್ಧೆಯ ವಿಷಯವು "ಭಾರತದ ಸ್ವಚ್ಛತೆಗೆ ನಾನು ಏನು ಮಾಡುತ್ತೇನೆ" (What will I do to make India Clean)
- ✓ ಚಿತ್ರಕಲಾ ಸ್ಪರ್ಧೆಯ ವಿಷಯವು "ನನ್ನ ಕನಸಿನ ಸ್ವಚ್ಛ ಭಾರತ" (Clean India of my dreams)

**ನಿಬಂಧನೆಗಳು:-**

- ✓ ಪ್ರಬಂಧವು ಗರಿಷ್ಠ 250 ಪದಗಳಿಗೆ ಮೀರಬಾರದು.
- ✓ ಪ್ರಬಂಧದ ಭಾಷೆಯು ಶಾಲಾ ಬೋದನಾ ಮಾಧ್ಯಮದ ಭಾಷೆಯಾಗಿರಬೇಕು

ಇದರಂತೆ ಪ್ರತಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೇರೇಪಿಸುವುದು.ಈ ಎರಡು ಸ್ಪರ್ಧೆಗಳು ಶಾಲೆ,ಜಿಲ್ಲೆ,ರಾಜ್ಯ ಹಾಗೂ ರಾಷ್ಟ್ರಮಟ್ಟದವರೆಗೆ ನಡೆಯುತ್ತವೆ.ಪ್ರತಿ ಸ್ಪರ್ಧೆಯ 3 ಉತ್ತಮ ಸ್ಪರ್ಧಿಗಳನ್ನು ಅಂದರೆ ಚಿತ್ರ ಕಲಾಸ್ಪರ್ಧೆ 3 ಮತ್ತು ಪ್ರಬಂಧ ಸ್ಪರ್ಧೆ 3+3 ಶಾಲಾ ಹಂತದಿಂದ ರಾಷ್ಟ್ರ ಹಂತದವರೆಗೆ ಸೂಕ್ತವಾಗಿ ಪುರಸ್ಕರಿಸಲಾಗುವುದು.

**ಶಾಲಾ ಹಂತ:-**

- ➢ ಚಿತ್ರಕಲಾ ಸ್ಪರ್ಧೆಯಿಂದ 1-5ನೇ ತರಗತಿ ಮೂರು ವಿದ್ಯಾರ್ಥಿಗಳು. [ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರು]
- ➢ ಪ್ರಬಂಧ ಸ್ಪರ್ಧೆಯಿಂದ 6-8ನೇ ತರಗತಿ ಮೂರು ವಿದ್ಯಾರ್ಥಿಗಳು. [ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರು]
- ➢ ಪ್ರಬಂಧ ಸ್ಪರ್ಧೆಯಿಂದ 9-12ನೇ ತರಗತಿ ಮೂರು ವಿದ್ಯಾರ್ಥಿಗಳು. [ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರು]

**(ಶಾಲಾ ಹಂತದಲ್ಲಿ ಆಯ್ಕೆಯಾದ ಕೃತಿಗಳನ್ನು(3+3+3)ಜಲ್ಲಾ ಹಂತಕ್ಕೆ ನಿಗಧಿತ ಅವಧಿಯೊಳಗೆ ಸಲ್ಲಿಸುವುದು.)**

**ಜಿಲ್ಲಾ ಹಂತ:-**

- ✓ ಪ್ರತಿ ಶಾಲೆಯಿಂದ ಬಂದ ಎಲ್ಲಾ ಪ್ರಸ್ತಾವನೆಗಳನ್ನು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಒಂದು ಸಮಿತಿಯನ್ನು ರಚಿಸಿ ಸಮಿತಿಯ ಮೂಲಕ ಪ್ರತಿ ವಿಭಾಗದಿಂದ ಮೂರು ಉತ್ತಮ ಸಾಧಕರನ್ನು ಆಯ್ಕೆ ಮಾಡಿ [3+3+3] ಅಕ್ಟೋಬರ್ 02, 2017ರಂದು ಪುರಸ್ಕರಿಸಲು ಕ್ರಮ ವಹಿಸುವುದು ಹಾಗೂ ವಿಜೇತರ ಕೃತಿಗಳನ್ನು ರಾಜ್ಯ ಹಂತಕ್ಕೆ ಕಳಹಿಸುವುದು.

**ರಾಜ್ಯಹಂತ:-**

- ✓ ಪ್ರತಿ ಜಿಲ್ಲೆಯಿಂದ ಬಂದ ಮೂರು ವಿಭಾಗದ [3+3+3] ಉತ್ತಮ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾರ್ಯದರ್ಶಿಗಳು ರಚಿಸುವ ಸಮಿತಿಯು ಮೌಲ್ಯಮಾಪನ ಮಾಡಿ ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಿ ಅಕ್ಟೋಬರ್ 02, 2017ರಂದು ಪುರಸ್ಕರಿಸಲು ಕ್ರಮ ವಹಿಸುವುದು.
- ✓ ಕೆಳಕಂಡ ಕಾಲಮಿತಿಯೊಳಗೆ ಎಲ್ಲಾ ಸ್ಪರ್ಧೆ ಅಂದರೆ 1-5ನೇ ತರಗತಿಯ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ, 6-8ನೇ ತರಗತಿ ಹಾಗೂ 9-12ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರತಿ ಸ್ಪರ್ಧೆಯಲ್ಲಿ 3 ಉತ್ತಮ(ಪ್ರಥಮ,ದ್ವಿತೀಯ ಹಾಗೂ ತೃತೀಯ) ಕೃತಿಗಳನ್ನು ಮುಂದಿನ ಹಂತಕ್ಕೆ ಕಳುಹಿಸುವುದು.

| ಕ್ರಸಂ | ಹಂತ | ಮುಂದಿನ ಹಂತಕ್ಕೆ ಕಳಹಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ |
|---|---|---|
| 1 | ಶಾಲೆ | 5ನೇ ಸೆಪ್ಟೆಂಬರ್ 2017(ಜಿಲ್ಲಾ ಹಂತಕ್ಕೆ) |
| 2 | ಜಿಲ್ಲೆ | 11ನೇ ಸೆಪ್ಟೆಂಬರ್ 2017(ರಾಜ್ಯ ಹಂತಕ್ಕೆ) |
| 3 | ರಾಜ್ಯ | 18ನೇ ಸೆಪ್ಟೆಂಬರ್ 2017(ರಾಷ್ಟ್ರ ಹಂತಕ್ಕೆ) |

ದಿನಾಂಕ:18/09/2017 ರೊಳಗೆ ರಾಜ್ಯ ಮಟ್ಟದ ವಿಜೇತರ ಕೃತಿಗಳನ್ನು(3+3+3)ಮಾನವ ಸಂಪನ್ಮೂಲ ಅಭಿವೃದ್ದಿ ಸಚಿವಾಲಯಕ್ಕೆ ಕಳುಹಿಸಬೇಕು. ರಾಷ್ಟ್ರ ಮಟ್ಟದಲ್ಲಿ ಆಯ್ಕೆಯಾದ ವಿಜೇತರನ್ನು ಸ್ವಚ್ಛಭಾರತ ಮಿಷನ್‌ನ ವಾರ್ಷಿಕೋತ್ಸವ ದಿನವಾದ 2ನೇ ,ಅಕ್ಟೋಬರ್ 2017. ರಂದು Ministry of Drinking water and Sanitation ರವರಿಂದ ಪುರಸ್ಕರಿಸಲಾಗುವುದು.

✓ **ರಾಷ್ಟ್ರ ಮಟ್ಟದ ಬಹುಮಾನಗಳ ವಿವರ:-**

**1.ಚಿತ್ರಕಲಾ ಸ್ಪರ್ಧಾ ವಿಷಯ:** "ನನ್ನ ಕನಸಿನ ಸ್ವಚ್ಛ ಭಾರತ" (Clean India of my dreams)
ಅರ್ಹತೆ:1ರಿಂದ 5ನೇ ತರಗತಿಯ ಎಲ್ಲ ವಿದ್ಯಾರ್ಥಿಗಳು
ಪ್ರಥಮ ಬಹುಮಾನ ನಗದು ಮತ್ತು ಪ್ರಮಾಣ ಪತ್ರ
ದ್ವಿತೀಯ ಬಹುಮಾನ ನಗದು ಮತ್ತು ಪ್ರಮಾಣ ಪತ್ರ
ತೃತೀಯ ಬಹುಮಾನ ನಗದು ಮತ್ತು ಪ್ರಮಾಣ ಪತ್ರ

**2 ಪ್ರಬಂಧ ಸ್ಪರ್ಧಾ ವಿಷಯ:**ಭಾರತದ ಸ್ವಚ್ಛತೆಗೆ ನಾನು ಏನು ಮಾಡುತ್ತೇನೆ" (What will I do to make India Clean)
**ವಿಭಾಗ-1:ಅರ್ಹತೆ:** 6ರಿಂದ 8ನೇ ತರಗತಿಯ ಎಲ್ಲಾವಿದ್ಯಾರ್ಥಿಗಳು
ಪ್ರಥಮ ಬಹುಮಾನ ನಗದು ಮತ್ತು ಪ್ರಮಾಣ ಪತ್ರ
ದ್ವಿತೀಯ ಬಹುಮಾನ ನಗದು ಮತ್ತು ಪ್ರಮಾಣ ಪತ್ರ
ತೃತೀಯ ಬಹುಮಾನ ನಗದು ಮತ್ತು ಪ್ರಮಾಣ ಪತ್ರ
**ವಿಭಾಗ-2:ಅರ್ಹತೆ:**9ರಿಂದ12ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ
ಪ್ರಥಮ ಬಹುಮಾನ ನಗದು ಮತ್ತು ಪ್ರಮಾಣ ಪತ್ರ
ದ್ವಿತೀಯ ಬಹುಮಾನ ನಗದು ಮತ್ತು ಪ್ರಮಾಣ ಪತ್ರ
ತೃತೀಯ ಬಹುಮಾನ ನಗದು ಮತ್ತು ಪ್ರಮಾಣ ಪತ್ರ

ರಾಜ್ಯ ಹಂತದಲ್ಲಿ ಆಯ್ಕೆಯಾದ ಪ್ರಬಂಧ ಸ್ಪರ್ಧೆಯ ವಿಜೇತರ ಕೃತಿಗಳನ್ನು(ಪ್ರಬಂಧ) ಹಾಗೂ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ವಿಜೇತರ ಚಿತ್ರಕಲಾ ಕೃತಿಗಳನ್ನು ಸ್ಕಾನ್ ಮಾಡಿ ರಾಜ್ಯ ಹಂತದಿಂದ swachhsankalpessaysp@gmail.com ಗೆ ಇ-ಮೇಲ್ ಮೂಲಕ ದಿನಾಂಕ:29/09/2017 ರೊಳಗೆ ಕಳುಹಿಸಬೇಕು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

*ಪ್ರತಿಯನ್ನು:-*

1. ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾ/ಕಲಬುರಗಿ ರವರ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು[ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಅಗತ್ಯಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಅಗತ್ಯ ಕ್ರಮಕ್ಕಾಗಿ.
5. ರಾಜ್ಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು ರಾಜ್ಯ ಮಟ್ಟಕ್ಕೆ ಆಯ್ಕ ಮಾಡುವ ನೋಡಲ್ ಸಂಸ್ಥೆಯಾಗಿ ಗುರುತಿಸಿದ್ದು ಈ ಸಂಬಂಧ ತಾವುಗಳು ಜಿಲ್ಲಾ ಉಪನಿರ್ದೇಶಕರುಗಳನ್ನು ಸಂಪರ್ಕಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಮಾಡುವ ಪ್ರಕ್ರಿಯೆ ದಾಖಲೆಗಳನ್ನು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರ ಅವಗಾಹನೆಗೆ ಸಲ್ಲಿಸುವಂತೆ ತಿಳಿಸಿದೆ. 6.ಕಛೇರಿ ಪ್ರತಿ.